# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2187(2550)
2. ಸದಸ್ಯರ ಹೆಸರು : ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 24.03.2022.
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಎತ್ತಿನಹೊಳೆ ಯೋಜನೆಯಡಿ ನೀರನ್ನು ಶೇಖರಿಸಲು ತುಮಕುರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಹತ್ತಿರ ಭೈರಗೊಂಡ್ಲುವಿನ ಬಳಿ ನೀರಿನ ಶೇಖರಣಾ ಅಣೆಕಟ್ಟನ್ನು ನಿರ್ಮಿಸಲು ಯೋಚಿಸಲಾಗಿದೆಯೇ: | ಹೌದು |
| ಆ) | ಈ ಶೇಖರಣ ಜಲಾಶಯಕ್ಕಾಗಿ ಬೇಕಾಗಿರುವ ಭೂಮಿಯ ವಿಸ್ತೀರ್ಣ ಎಷ್ಟು; ಭೂಸ್ವಾಧೀನಕ್ಕಾಗಿ ಬೇಕಾಗಿರುವ ಹಣದ ಮೊತ್ತ ಎಷ್ಟು; ಇದುವರೆವಿಗೂ ಭೂಸ್ವಾಧೀನ ಪ್ರಕ್ರಿಯೆ ಮುಗಿಸದಿರಲು ಕಾರಣಗಳೇನು: | ಸದರಿ ಜಲಾಶಯ ನಿರ್ಮಾಣಕ್ಕೆ ಕೊರಟಗೆರೆ ತಾಲ್ಲೂಕಿನ ಕೋಳಾಲ ಹೋಬಳಿಯ 17 ಗ್ರಾಮಗಳ 2662 ಎಕರೆ 10 ಗುಂಟೆ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಸಾಸಲು ಹೋಬಳಿಯ 11 ಗ್ರಾಮಗಳ 2534 ಎಕರೆ 12 ಗುಂಟೆ ಸೇರಿ ಒಟ್ಟು 5196 ಎಕರೆ 22 ಗುಂಟೆ ಭೂಮಿಯ ಭೂಸ್ವಾಧೀನ ಅವಶ್ಯಕತೆಯಿರುತ್ತದೆ. ಪ್ರಸ್ತುತ ಚಾಲ್ತಿಯಲ್ಲಿರುವ ಮೌಲ್ಯದ ಪ್ರಕಾರ ಸದರಿ ಜಲಾಶಯಕ್ಕೆ ಅವಶ್ಯವಿರುವ ಭೂಮಿಯ ಸ್ವಾಧೀನಕ್ಕಾಗಿ ರೂ.2116.61 ಕೋಟಿ ಅವಶ್ಯಕತೆ ಇರುತ್ತದೆ.<br><br>ಆದರೆ, ಸದರಿ ಜಲಾಶಯದ ನಿರ್ಮಾಣದಿಂದ ಕೊರಟಗೆರೆ ತಾಲ್ಲೂಕಿನಲ್ಲಿ ಮುಳುಗಡೆಯಾಗುವ ಜಮೀನುಗಳಿಗೆ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಮುಳುಗಡೆಯಾಗುವ ಜಮೀನುಗಳಿಗೆ ನೀಡುವ ಪರಿಹಾರ ದರವನ್ನೇ ನೀಡಲು ಕೊರಟಗೆರೆ ತಾಲ್ಲೂಕಿನ ರೈತರು ಒತ್ತಾಯಿಸುತ್ತಿರುವುದರಿಂದ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. |
| ಇ) | ಭೈರಗೊಂಡ್ಲು ಜಲಾಶಯವನ್ನು ಯಾವ ಕಾಲಮಿತಿಯೊಳಗೆ ನಿರ್ಮಿಸಲಾಗುವುದು? | ಬೈರಗೊಂಡ್ಲು ಜಲಾಶಯ ನಿರ್ಮಾಣದ ಪರ್ಯಾಯ ಪ್ರಸ್ತಾವನೆ ಒಳಗೊಂಡ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಪುನರ್ ಪರಿಷ್ಕೃತ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ಪಡೆದುಕೊಂಡು ಜಲಾಶಯ ನಿರ್ಮಾಣ ಮತ್ತು ಜಲಾಶಯದ ನಂತರದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ. |

**ಸಂಖ್ಯೆ: ಜಸಂಇ 47 ಡಬ್ಲ್ಯೂಎಲ್ಎ 2022**

**(ಗೋವಿಂದ ಎಂ. ಕಾರಜೋಳ)**
**ಜಲಸಂಪನ್ಮೂಲ ಸಚಿವರು**